# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಗಳೂರು

## ಸಿ ಸಿ ನಂಃ607/2019

## ಚಾಸಾ-1/ಪ್ರಾಸಾ-1

ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕಃ**18.05.2023.**

ಹೆಸರು : ಡಾ. ಮಲ್ಲಪ್ಪ ತಂದೆ ನಿಂಗಪ್ಪ
ವಯಸ್ಸು : 37 ವರ್ಷ
ಉದ್ಯೋಗ : ವೈದ್ಯಾಧಿಕಾರಿ, ಕಿಮ್ಸ್, ಹುಬ್ಬಳ್ಳಿ
ವಿಳಾಸ : ಹುಬ್ಬಳಿ

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ನಾನು ಡಿಸೆಂಬರ್ 2015 ರಿಂದ ಮಾರ್ಚ್ 2022 ರವರೆಗೂ ಜಗಳೂರು ಸರ್ಕಾರಿ ಆಸ್ಪತ್ರೆಯಲ್ಲಿ ಕೀಲು ಮೂಳೆ ರೋಗ ತಜ್ಞರು ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ09.01.2019 ರಂದು ರಾತ್ರಿ ವೇಳೆ ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿ ಇದ್ದಾಗ ರಾತ್ರಿ 09ಃ30 ಗಂಟೆಗೂ ಮುಂಚೆ ಆಸ್ಪತ್ರೆಗೆ ಬಂದ ಎಲ್ಲಾ ರೋಗಿಗಳು ಚಿಕಿತ್ಸೆ ಪಡೆದುಕೊಂಡು ಹೋಗಿರುತ್ತಾರೆ. ಅವರಲ್ಲಿ ಇಬ್ಬರು ತಮ್ಮ ಮಗುವನ್ನು ಹೊಟ್ಟೆ ನೋವು ಎಂದುಹೇಳಿ ಚಿಕಿತ್ಸೆ ಪಡೆದುಕೊಂಡು ಹೋಗಿರುತ್ತಾರೆ. ನಾನು ಸದರಿ ಮಗುವಿಗೆ ಇಂಜೆಕ್ಷನ್ ಬರೆದುಕೊಟ್ಟಿದ್ದು, ನಮ್ಮ ಆಸ್ಪತ್ರೆಯ ನರ್ಸ್ ಸದರಿ ಮಗುವಿಗೆ ಇಂಜೆಕ್ಷನ್ ಕೊಟ್ಟಿರುತ್ತಾರೆ. ಸದರಿ ಮಗುವಿಗೆ ಇಂಜೆಕ್ಷನ್ ನೀಡಿದ ನಂತರ ಮಗುವಿಗೆ ಯಾವುದೇ ತೊಂದರೆ ಆದ ಬಗ್ಗೆ ನಮಗೆ ಕಂಡುಬಂದಿರುವುದಿಲ್ಲ. ನಂತರ ಅದೇ ದಿನ ರಾತ್ರಿ 09ಃ30 ಗಂಟೆಗೆ ಆರೋಪಿತರು ಆಸ್ಪತ್ರೆಗೆ ಬಂದು ನಮ್ಮ ಆಸ್ಪತ್ರೆಯ ನರ್ಸ್ ಜೊತೆ ಸದರಿ ಮಗುವಿಗೆ ಸರಿಯಾಗಿ ಇಂಜೆಕ್ಷನ್ ಮಾಡಿರುವುದಿಲ್ಲ ಎಂದು ಅವಾಚ್ಯ ಶಬ್ದಗಳಿಂದ ಬೈಯುತ್ತಾ ಅವರ ಜೊತೆ ಜಗಳವಾಡಿರುತ್ತಾರೆ. ನಂತರ ಸದರಿ ಆರೋಪಿತರು ನನ್ನ ಚೇಂಬರ್ ಗೆ ಬಂದು ನನಗೂ ಸಹ ನಿನಗೆ ಸರಿಯಾಗಿ ಚಿಕಿತ್ಸೆ ನೀಡಲು ಬರುವುದಿಲ್ಲ ನೀನು ಡಾಕ್ಟರ್ ಅಲ್ಲ ಎಂದು ಹೇಳುತ್ತಾ ನನಗೆ ಅವಾಚ್ಯ

ಶಬ್ದಗಳಿಂದ ಬೈಯುತ್ತಾ ಅವರಲ್ಲಿ ಆರೋಪಿ ನಂ:1 ನನಗೆ ತಳ್ಳಾಡಿರುತ್ತಾರೆ. ಸದರಿ ಆರೋಪಿತರ ವರ್ತನೆಯಿಂದ ನನ್ನ ಸರ್ಕಾರಿ ಕರ್ತವ್ಯಕ್ಕೆ ಅಡತಡೆ ಉಂಟಾಗಿರುತ್ತದೆ. ನಂತರ ನಾನು ಮಾರನೆ ದಿವಸ ಬೆಳಿಗ್ಗೆ ಜಗಳೂರು ಪೋಲಿಸ್ ಠಾಣೆಗೆ ಹೋಗಿ ಆರೋಪಿತರ ವಿರುದ್ದ ದೂರನ್ನು ದಾಖಲಿಸಿರುತ್ತೇನೆ. ಈಗ ನೋಡುತ್ತಿರುವ ದೂರು ನಾನು ಸಲ್ಲಿಸಿದ ದೂರಾಗಿರುತ್ತದೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ದೂರು ನಿ.ಪಿ.1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

ನಾನು ದೂರು ನೀಡಿದ ನಂತರ 1-2 ದಿನಗಳಲ್ಲಿ ಪೋಲಿಸರು ಜಗಳೂರು ಸರ್ಕಾರಿ ಆಸ್ಪತ್ರೆಗೆ ಬಂದು ಸ್ಥಳ ಪಂಚನಾಮೆಯನ್ನು ಮಾಡಿರುತ್ತಾರೆ. ಸದರಿ ಗುನ್ಹಾ ಸ್ಥಳವನ್ನು ಪೋಲಿಸರಿಗೆ ನಾನೇ ತೋರಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಸಂಜೆ 04:00 ರಿಂದ 06:00 ಗಂಟೆಯ ಅವದಿಯಲ್ಲಿ ಮಾಡಿರುತ್ತಾರೆ. ನನಗೆ ನಿಖರವಾದ ಸಮಯ ಈಗ ನೆನಪು ಇರುವುದಿಲ್ಲ. ಸದರಿ ಪಂಚನಾಮೆಯನ್ನು ಚಾಸಾ-5 ಮತ್ತು 6 ಇವರ ಸಮಕ್ಷಮ ಮಾಡಿರುತ್ತಾರೆ ಮತ್ತು ನಮ್ಮ ಸಹಿಗಳನ್ನು ಪಡೆದಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ಸ್ಥಳ ಪಂಚನಾಮೆಯನ್ನು ನಿ.ಪಿ.2 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಪೋಟೋನಲ್ಲಿರುವ ಸ್ಥಳ ಗುನ್ಹಾ ಸ್ಥಳವಾಗಿರುತ್ತದೆ. ಸದರಿ ಪೋಟೋಗಳನ್ನು ಪೋಲಿಸರು ಪಂಚನಾಮೆ ಕಾಲಕ್ಕೆ ಪಡೆದಿರುತ್ತಾರೆ. ನಾನು ಘಟನೆಯಾದ ಮಾರನೆ ದಿವಸ ಪೊಲಿಸರಿಗೆ ಸದರಿ ಜಗಳದಲ್ಲಿ ಆರೋಪಿತರು ನನಗೆ ಕೈಯಿಂದ ಹಲ್ಲೆ ಮಾಡಿರುತ್ತಾರೆ ಎಂದು ಹೇಳಿ ನನ್ನ ಮರು ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು:-ಆರೋಪಿ ಪರ ವಕೀಲರಿಂದ:-</u>**

ದಿ:09.01.2019 ರಂದು ಜಗಳೂರು ಸರ್ಕಾರಿ ಆಸ್ಪತ್ರೆಯಲ್ಲಿ ಎಷ್ಟು ಜನ ವೈದ್ಯರು ಕರ್ತವ್ಯದಲ್ಲಿ ಇದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿ ಆ ದಿನ ನಾನು ಒಬ್ಬನೆ ಕರ್ತವ್ಯದ ಮೇಲೆ ಇದ್ದೆ ಎಂದು ಹೇಳುತ್ತಾರೆ. ಆ ದಿನ ನನ್ನ ಜೊತೆ ಮೂರು ಜನ ಶಶ್ರೂಷಕಿಯರು ಹಾಜರು ಇದ್ದರು. ಅವರ ಹೆಸರು ರೋಹಿಣಿ, ನೇತ್ರಮ್ಮ

ಮತ್ತು ಮೀನಾಕ್ಷಮ್ಮ ಇರುತ್ತದೆ. ಸಾಮಾನ್ಯವಾಗಿ ಆಸ್ಪತ್ರೆಯಲ್ಲಿ ನಾವು ಕರ್ತವ್ಯಕ್ಕೆ ಹಾಜರಾದಾಗ ಹಾಜರಾತಿ ವಹಿಯಲ್ಲಿ ಸಹಿ ಮಾಡುತ್ತೇವೆ ಎಂದರೆ ಸರಿ. ಅದೇ ರೀತಿ ಆಸ್ಪತ್ರೆಯಲ್ಲಿ ಯಾವ ವೈದ್ಯರು ರಾತ್ರಿ ವೇಳೆಯಲ್ಲಿ ಕರ್ತವ್ಯದಲ್ಲಿ ನೇಮಕ ಮಾಡಿರುತ್ತಾರೆ ಎನ್ನುವ ಬಗ್ಗೆ ಒಂದು ವಹಿಯನ್ನು ಇಟ್ಟಿರುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಸರ್ಕಾರಿ ಆಸ್ಪತ್ರೆಯಲ್ಲಿ ಬೆಳಗಿನ ಶಿಫ್ಟ್ ಮತ್ತು ರಾತ್ರಿ ಶಿಫ್ಟ್ ಗಳಲ್ಲಿ ಬೇರೆ ವೈದ್ಯರು ಮತ್ತು ಸಿಬ್ಬಂದಿಯರು ಕೆಲಸ ಮಾಡುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಸರ್ಕಾರಿ ಆಸ್ಪತ್ರೆಯಲ್ಲಿ ಯಾವುದೇ ಒಬ್ಬ ವ್ಯಕ್ತಿ ಚಿಕಿತ್ಸೆಗಾಗಿ ಬಂದ ಸಂದರ್ಭದಲ್ಲಿ ಚಿಕಿತ್ಸೆ ಚೀಟಿಯನ್ನು ಮಾಡುತ್ತಾರೆ. ಆ ಬಗ್ಗೆ ವಹಿಯನ್ನು ಸಹ ಆಸ್ಪತ್ರೆಯಲ್ಲಿ ಮೈಂಟೈನ್ ಮಾಡಿರುತ್ತಾರೆ ಎಂದರೆ ಸರಿ. ಒಬ್ಬ ವ್ಯಕ್ತಿಯ ಹತ್ತಿರ ಚೀಟಿ ಇದ್ದ ಸಂದರ್ಭದಲ್ಲಿ ಆತನು ಪುನಃ ಹೊಸ ಚೀಟಿ ಮಾಡಿಸುವ ಅವಶ್ಯವಿರುವುದಿಲ್ಲ ಎಂದರೆ ಸರಿ. ಒಂದು ಚೀಟಿಗೆ ಯಾವುದೇ ರೀತಿ ಅವದಿ ಇರುವುದಿಲ್ಲ. ಸಾಕ್ಷಿ ಮುಂದುವರಿದು ಸದರಿ ಚೀಟಿಯ ಹಾಳೆ ಸಂಪೂರ್ಣ ಮುಗಿಯವರೆಗೂ ಹೊಸ ಚೀಟಿ ಮಾಡಿಸುವ ಅವಶ್ಯ ಇರುವುದಿಲ್ಲ ಎಂದು ಹೇಳುತ್ತಾರೆ. ದಿಃ09.01.2019 ರಂದು ಇಬ್ಬರು ಮಗುವಿಗೆ ಚಿಕಿತ್ಸೆಗಾಗಿ ಕರೆದುಕೊಂಡು ಬಂದಿದ್ದರು ಎನ್ನುವ ಮಗುವಿನ ಚೀಟಿ ಹೊಸ ಚೀಟಿ ಅಥವಾ ಹಳೆ ಚೀಟಿಯಾಗಿತ್ತು ಈಗ ನನಗೆ ನೆನಪು ಇರುವುದಿಲ್ಲ. ದಿಃ09.01.2019 ರಂದು ರಾತ್ರಿ 09ಃ30 ಗಂಟೆಗಿಂತ ಮುಂಚೆ ಇಬ್ಬರು ಒಂದು ಮಗುವನ್ನು ಕರೆದುಕೊಂಡು ಬಂದು ಚಿಕಿತ್ಸೆ ಪಡೆದುಕೊಂಡು ಹೋಗಿರುತ್ತಾರೆ ಎನ್ನುವ ವಿಷಯ ನಾನು ನಿ.ಪಿ.1 ದೂರಿನಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ರಾತ್ರಿ ವೇಳೆಯಲ್ಲಿ ಕರ್ತವ್ಯಕ್ಕೆ ಹಾಜರಾದಾಗ ನಾವು ಹಾಜರಾಗುವ ಮುಂಚೆ ಆಸ್ಪತ್ರೆಯಲ್ಲಿ ದಾಖಲಾದ ರೋಗಿಗಳನ್ನು ನಾವು ಒಂದು ರೌಂಡ್ ಹೋಗಿ ನೋಡಿಕೊಂಡು ಬರುತ್ತೇವೆ ಎಂದರೆ ಸರಿ. ದಿಃ09.01.2019 ರಂದು ಜಗಳೂರು ಸರ್ಕಾರಿ ಆಸ್ಪತ್ರೆಯಲ್ಲಿ ಎಷ್ಟು ಜನ ರೋಗಿಗಳು ಒಳ ರೋಗಿಯಾಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದರು ನನಗೆ ಈಗ ನೆನಪು ಇರುವುದಿಲ್ಲ. ಜಗಳೂರು ಸರ್ಕಾರಿ ಆಸ್ಪತ್ರೆ ನೂರು ಬೆಡ್ ಆಸ್ಪತ್ರೆಯಾಗಿರುತ್ತದೆ. ದಿನನಿತ್ಯ ಜಗಳೂರು ಸರ್ಕಾರಿ ಆಸ್ಪತ್ರೆಯಲ್ಲಿ ಸಾಮಾನ್ಯವಾಗಿ 70 ರಿಂದ 80 ಜನರು ಒಳ ರೋಗಿಯಾಗಿ ದಾಖಲಾಗಿರುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ನನಗೆ ಒಂದು ರೋಗಿಯನ್ನು ಪರೀಕ್ಷಿಸಲು 2 ರಿಂದ

3 ನಿಮಿಷ ಅವದಿಯಾಗುತ್ತದೆ. ಆರೋಪಿ ನಂ:1 ಜಗಳೂರು ಸರ್ಕಾರಿ ಆಸ್ಪತ್ರೆಯಲ್ಲಿ 2016 ರಿಂದ 2018 ರವರೆಗೆ ಲ್ಯಾಬ್ ಟೆಕ್ನೀಷಿಯನ್ ಎಂದು ಸೇವೆ ಸಲ್ಲಿಸಿರುತ್ತಾರೆ ಎಂದರೆ ಸರಿ. 2018 ರಲ್ಲಿ ಪಲ್ಲಾಗಟ್ಟೆ ಆಸ್ಪತ್ರೆಯಲ್ಲಿ ಲ್ಯಾಬ್ ಟೆಕ್ನೀಷಿಯನ್ ಯಾರು ಇರುವುದಿಲ್ಲ ಎಂದು ಆರೋಪಿ ನಂ:1 ಇವರಿಗೆ ಸದರಿ ಆಸ್ಪತ್ರೆಗೆ ಡೆಪೂಟೇಷನ್ ಮಾಡಿರುತ್ತಾರೆ ಎಂದರೆ ಸರಿ. ಸನ್ 2016 ರಿಂದ 2018 ರವರೆಗೂ ನಾನು ಮತ್ತು ಆರೋಪಿ ನಂ:1 ಜೊತೆಯಾಗಿ ಜಗಳೂರು ಸರ್ಕಾರಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿರುತ್ತೇವೆ ಎಂದರೆ ಸರಿ. ನಾನು ಜಗಳೂರು ಸರ್ಕಾರಿ ಆಸ್ಪತ್ರೆಯಲ್ಲಿ ನೇಮಕಗೊಂಡಾಗ ಸನ್ 2015 ಡಿಸೆಂಬರ್ ತಿಂಗಳನಲ್ಲಿ ನಂದಕುಮಾರ್ ಎನ್ನುವ ವೈದ್ಯರು ಚಿಗಟೇರಿ ಆಸ್ಪತ್ರೆ, ದಾವಣಗೆರೆಗೆ ವರ್ಗಾವಣೆಯಾಗಿರುತ್ತಾರೆ ಎಂದರೆ ಸರಿ. ಸನ್ 2015 ಡಿಸೆಂಬರ್ ಕ್ಕಿಂತ ಮುಂಚೆ ನಾನು ಎಸ್.ಎನ್.ಆರ್. ಆಸ್ಪತ್ರೆಯಲ್ಲಿ ಮೆಡಿಕಲ್ ಪ್ರಾಕ್ಟೀಷನರ್ ಆಗಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಸದರಿ ಆಸ್ಪತ್ರೆಯಲ್ಲಿ ನನ್ನ ಕರ್ತವ್ಯದ ಅವದಿ ಮುಗಿದ ನಂತರ ಅಲ್ಲಿ ದಾಖಲಾದ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ನಂದಕುಮಾರ್ ಇವರು ಇವತ್ತಿಗೂ ಸಹ ಸದರಿ ಎಸ್.ಎನ್.ಆರ್. ಆಸ್ಪತ್ರೆಯಲ್ಲಿ ವೈದ್ಯರು ಎಂದು ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಸಹ ಜಗಳೂರು ಸರ್ಕಾರಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುವ ಕಾಲಕ್ಕೆ ಎಸ್.ಎನ್.ಆರ್. ಆಸ್ಪತ್ರೆಯಲ್ಲಿ ವೈದ್ಯರು ಎಂದು ಕೆಲಸಕ್ಕೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ನಾನು ಜಗಳೂರು ಸರ್ಕಾರಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುವ ಅವದಿಯಲ್ಲಿ ಯಾವುದೇ ಒಂದು ಕೀಲು ಮೂಳೆ ರೋಗಿ ಬಂದ ಸಂದರ್ಭದಲ್ಲಿ ನಾನು ಅವರಿಗೆ ಎಸ್.ಎನ್.ಆರ್. ಆಸ್ಪತ್ರೆ, ದಾವಣಗೆರೆಗೆ ಹತ್ತಿರ ಹೋಗಿರಿ ಎಂದು ಸಲಹೆ ನೀಡುತ್ತಿದ್ದೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ನಂದ ಕುಮಾರ್ ವೈದ್ಯರು ಬಡವರಿಗೆ ಕಡಿಮೆ ಹಣ ಪಡೆದು ಎಸ್.ಎನ್.ಆರ್. ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡುತ್ತಿದ್ದರು ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ನಾನು ಆರೋಪಿತರಿಗೆ ಯಾವುದೇ ರೋಗಿ ಬಂದರೂ ಅವರಿಗೆ ಎಸ್.ಎನ್.ಆರ್. ಆಸ್ಪತ್ರೆ, ದಾವಣಗೆರೆಗೆ ನನ್ನ ಮುಖಾಂತರ ಹೆಚ್ಚಿನ ಚಿಕಿತ್ಸೆಗಾಗಿ ಕಳುಹಿಸಿಕೊಡಿ ಎಂದು ಹೇಳುತ್ತಿದ್ದೆ ಎಂದರೆ ಸರಿಯಲ್ಲ. ನಾನು ಹೇಳಿದ್ದರೂ ಕೂಡ ಆರೋಪಿತರು ರೋಗಿಗಳಿಗೆ ನಂದಕುಮಾರ್ ವೈದ್ಯರ ಕಡೆ ಹೆಚ್ಚಿನ

ಚಿಕಿತ್ಸೆಗಾಗಿ ಕಳುಹಿಸಿಕೊಡುತ್ತಿದ್ದ ಕಾರಣ ನಾನು ಅವರ ವಿರುದ್ದ ದ್ವೇಷದ ಭಾವನೆಯನ್ನು ಬೆಳೆಸಿಕೊಂಡು ನಾನು ಅವರ ವಿರುದ್ದ ಸುಳ್ಳು ದೂರನ್ನು ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ರಾತ್ರಿ 11 ರಿಂದ 12 ಗಂಟೆಯವರೆಗೂ ಸಹ ಜನರು ಚಿಕಿತ್ಸೆಗಾಗಿ ಆಸ್ಪತ್ರೆಗಾಗಿ ಬರುತ್ತಾರೆ ಎಂದರೆ ಸರಿ. ದಿಃ09.01.2019 ರಂದು ಇಬ್ಬರು ಮಗುವನ್ನು ಚಿಕಿತ್ಸೆಗಾಗಿ ಕರೆದುಕೊಂಡು ಬಂದಿದ್ದರು ಎನ್ನುವ ವ್ಯಕ್ತಿಗಳು ಯಾರು ಇರುತ್ತಾರೆ ನನಗೆ ಗೊತ್ತಿರುವುದಿಲ್ಲ.

ಆರೋಪಿ ನಂಃ2 ಸಹ ನಮ್ಮ ಇಲಾಖೆಯ ಸಿಬ್ಬಂದಿಯಾಗಿರುತ್ತಾರೆ ಎಂದರೆ ಸರಿ. ಈ ಪ್ರಕರಣದ ಘಟನೆ ನಡೆದಾಗ 40-50 ಜನರು ನೆರೆದಿದ್ದರು. ಆರೋಪಿತರು ನನ್ನ ಜೊತೆ ಜಗಳವಾಡುತ್ತಿರುವಾಗ ಸದರಿ ಜಗಳವನ್ನು ಸಾರ್ವಜನಿಕರು ಬಿಡಿಸಿರುತ್ತಾರೆ ಎನ್ನುವ ಬಗ್ಗೆ ನನ್ನ ದೂರಿನಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ಆರೋಪಿತರು ನಾನು ಇಂಜೆಕ್ಷನ್ ನೀಡಿದ ಮಗುವಿಗೆ ಊತ ಬಂದಿರುತ್ತದೆ ಎಂದು ಹೇಳಲು ಬಂದ ಸಂದರ್ಭದಲ್ಲಿ ನಾನು ಆರೋಪಿರ ಮೇಲೆ ಇದ್ದ ಹಳೆ ದ್ವೇಷದಿಂದ ಅವರ ವಿರುದ್ದ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಘಟನೆ ನಡೆದ ದಿನವೇ ಏಕೆ ದೂರನ್ನು ದಾಖಲಿಸಿರುವುದಿಲ್ಲ ಎನ್ನುವ ಪ್ರಶ್ನೆಗೆ ಆ ದಿನ ಆಸ್ಪತ್ರೆಯಲ್ಲಿ ಬೇರೆ ವೈದ್ಯರು ಇಲ್ಲದ ಕಾರಣ ನಾನು ಅದೇ ದಿನ ದೂರನ್ನು ದಾಖಲಿಸಿರುವುದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರಿದು ನಾನು ಅದೇ ದಿನ ಘಟನೆ ನಡೆದ ಬಗ್ಗೆ ಪೋಲಿಸರಿಗೆ ಪೋನ್ ಮುಖಾಂತರ ಮಾಹಿತಿಯನ್ನು ನೀಡಿರುತ್ತೇನೆ ಎಂದು ಹೇಳುತ್ತಾರೆ. ನಾನು ಪೋನ್ ಮುಖಾಂತರ ಜಗಳದ ಬಗ್ಗೆ ಪೋಲಿಸರಿಗೆ ತಿಳಿಸಿದಾಗ ಪೊಲಿಸರು ಆಸ್ಪತ್ರೆಗೆ ಬಂದಿದ್ದರು ಅಥವಾ ಇಲ್ಲ ನನಗೆ ಈಗ ನೆನಪು ಇರುವುದಿಲ್ಲ. ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿರುವ ಬಗ್ಗೆ ನಾನು ಚಿಕಿತ್ಸೆ ಪಡೆದಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿತರು ಯಾವುದೇ ರೀತಿ ಹಲ್ಲೆ ಮಾಡಿರುವುದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ನನ್ನ ಕರ್ತವ್ಯಕ್ಕೆ ಅಡ್ಡಿ ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರು ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪೋಲಿಸರು ಘಟನಾ ಸ್ಥಳಕ್ಕೆ ಬಂದು ಸ್ಥಳ ಪಂಚನಾಮೆ ಮಾಡಿರುತ್ತಾರೆ ಎನ್ನಲಾದ ವೇಳೆಗೆ ಅಲ್ಲಿ ಎಷ್ಟು ಜನರು ನೆರೆದಿದ್ದರು ನನಗೆ ಈಗ ನೆನಪು ಇರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಪೋಲಿಸರು ಗುನ್ನಾ ಸ್ಥಳಕ್ಕೆ ಬೇಟಿ ಕೊಟ್ಟಿರುವುದಿಲ್ಲ ಮತ್ತು ಅಲ್ಲಿ ಯಾವುದೇ ಸ್ಥಳ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.2 ಪಂಚನಾಮೆಗೆ ಸಹಿಯನ್ನು ನಾನು ಆಸ್ಪತ್ರೆಯಲ್ಲಿ ಮಾಡಿರುತ್ತೇನೆ. ನಿ.ಪಿ.2 ರಲ್ಲಿ ಸಹಿ ಮಾಡಿರುವ ಪಂಚರು ಎಲ್ಲಿ ಸಹಿ ಮಾಡಿರುತ್ತಾರೆ ನನಗೆ ಗೊತ್ತಿರುವುದಿಲ್ಲ. ನಿ.ಪಿ.2 ಪೋಲಿಸರು ಬರೆದ ನಂತರ ನನಗೆ ಸಹಿ ಮಾಡು ಎಂದು ಹೇಳಿದ ಕಾರಣ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಪೋಲಿಸರು ಪಂಚನಾಮೆ ಮಾಡಿರುತ್ತಾರೆ ಎನ್ನಲಾದ ಸ್ಥಳದ ಚಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆಯದೇ ಇದ್ದರೂ ಸಹ ನಾನು ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿರುತ್ತಾರೆ.)

ಓ ಹೇ ಕೇ ಸರಿ ಇದೆ

sd

ಪ್ರ.ದ.ನ್ಯಾ.ದಂ., ಜಗಳೂರು